# ಎಲ್.ಐ.ಸಿ. ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್.

## ಲಿಕೋಬ್ಯಾಂಕ್ ರೋಡ್, ಉಡುಪಿ – 576 101.

## 2025–2026ನೇ ಸಾಲಿನ 64ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಬ್ಯಾಂಕಿನ 64ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ 22–08–2026ರಂದು, ಶನಿವಾರ ಪೂರ್ವಾಹ್ನ 11–30ಕ್ಕೆ ಸರಿಯಾಗಿ, **"ಅಕೋಬ್ಯಾಂಕು ವಜ್ರಮಹೋತ್ಸವ"** ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ. ಕೃಷ್ಣ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭಾಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

<u>**ವಿಷಯಗಳು:**</u>

1. ಸ್ವಾಗತ
2. 64ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
3. 2024–2025ನೇ ಸಾಲಿನ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ದೃಢೀಕರಿಸುವುದು.
4. 2025–2026ನೇ ಸಾಲಿನ ನಿರ್ದೇಶಕ ಮಂಡಳಿ ವರದಿಯನ್ನು ಅಂಗೀಕರಿಸುವುದು.
5. 2025–2026ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಮತ್ತು ವರದಿಯನ್ನು ಪರಿಗಣಿಸುವುದು ಮತ್ತು ಅಂಗೀಕರಿಸುವುದು.
6. 2025–2026ನೇ ಸಾಲಿನ ನಿವ್ವಳ ಲಾಭ ಹಂಚಿಕೆಯನ್ನು ಆಡಳಿತ ಮಂಡಳಿ ಸದಸ್ಯರು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಅನುಮೋದಿಸುವುದು.
7. ಸದಸ್ಯರ ಶೇರುಗಳ ಮೇಲೆ ಕೊಡತಕ್ಕ ಡಿವಿಡೆಂಟನ್ನು ಗೊತ್ತುಪಡಿಸುವುದು.
8. ಕಳೆದ ಆರ್ಥಿಕ ವರ್ಷ ಅಂದಾಜು ಆಯ–ವ್ಯಯ ಪತ್ರದಲ್ಲಿ ಮಂಜೂರಾದ ಮೊತ್ತ ಮಿತಿಗಿಂತ ಹೆಚ್ಚಾಗಿರುವುದನ್ನು ಸ್ಥಿರೀಕರಿಸುವುದು ಮತ್ತು 2026–27ನೇ ಸಾಲಿಗೆ ಆಯ–ವ್ಯಯ ಅಂದಾಜು ಪಟ್ಟಿಯನ್ನು ಅನುಮೋದಿಸುವುದು.
9. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕು ಹೊರಡಿಸಿದ ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ವಯ ಬ್ಯಾಂಕಿನ ಉಪನಿಬಂಧನೆಗಳ ತಿದ್ದುಪಡಿಗಳನ್ನು ಅಂಗೀಕರಿಸುವುದು. (ಅನುಬಂಧ I) ರಲ್ಲಿ ವಿವರಿಸಿದಂತೆ
10. 2025–26ನೇ ಸಾಲಿನ ಶಾಸನಾತ್ಮಕ ಲೆಕ್ಕ ಪರಿಶೋಧನಾ ವರದಿಗೆ ಸಲ್ಲಿಸಿದ ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅಂಗೀಕಾರ.
11. 2026–27ನೇ ಸಾಲಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಪ್ರಕಾರ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಯನ್ನು ನೇಮಕಾತಿಗಾಗಿ ಶಿಫಾರಸ್ಸು ಮಾಡಿರುವ ಕುರಿತು ನಿರ್ಣಯ ಕೈಗೊಳ್ಳುವುದು ಹಾಗೂ ಸಂಭಾವನೆ ನಿಗದಿಪಡಿಸುವುದು.
12. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ.
13. ಅಧ್ಯಕ್ಷರ ಅನುಮತಿ ಮೇರೆಗೆ ಬರುವ ಇತರೇ ವಿಷಯಗಳು
14. ವಂದನಾರ್ಪಣೆ.

## ಸೂಚನೆ:

1. ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದಾದ ಇತರ ವಿಷಯಗಳೇನಾದರೂ ಇದ್ದಲ್ಲಿ ಅಥವಾ ಹೆಚ್ಚಿನ ವಿವರ ಬೇಕಾದಲ್ಲಿ ಉಪನಿಬಂಧನೆಯನುಸಾರ ಮಹಾಸಭೆಗೆ 5 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಸೂಚಿಸಿದ ವಿಷಯಗಳನ್ನು ಚರ್ಚಿಸಲು ಅನುಮತಿ ಕೊಡಲಾಗುವುದು.

2. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ತಿದ್ದುಪಡಿಗೊಂಡು ಕಲಂ ಎ ಅನ್ವಯ ಬ್ಯಾಂಕಿನಲ್ಲಿ ಹತ್ತು ವರ್ಷ ಅವಧಿಗೂ ಮೀರಿ ಚಲಾವಣೆಯಾಗದ ಉಳಿತಾಯ ಖಾತೆ ಮತ್ತು ಜಮಾ ಬಾಕಿ ಹೊಂದಿರುವ ಯಾವುದೇ ಖಾತೆಗಳಲ್ಲಿ ಜಮಾ